O.S. No-120/2021

Dw-1

<u>ದಿನಾಂಕಃ 27-01-2026-ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟಿ ಸವಾಲುಃ ಶ್ರೀ DDJ ವಾದಿ ಪರ ವಕೀಲರಿಂದಃ**

ನನ್ನ ಹೆಂಡತಿಗೆ ಮಕ್ಕಳ ಶಸ್ತ್ರಚಿಕಿತ್ಸೆ ಆಗಿದೆ. ಆದ್ದರಿಂದ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ. ಅದಕ್ಕೆ ಸಂಬಂಧಿಸಿದ ವೈದ್ಯಕೀಯ ವರದಿಗಳನ್ನು ಹಾಜರು ಪಡಿಸಿಲ್ಲ. ಅವರಿಗೆ ಮಾತನಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಅವರಿಗೆ ವಿಶಾಂತ್ರಿ ಪಡೆಯಲು ಹೇಳಿರುತ್ತಾರೆ. ನನಗೆ ಸಾಕ್ಷ್ಯಾ ನುಡಿಯಲು ಜಿ ಪಿ ಎ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಈ ದಾವೆ ಬಾಕಿ ಇರುವಾಗಲೇ ಖರೀದಿ ಪತ್ರ ನೊಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ನೋಟಿಸ ಬಂದಾಗ ಈ ಪ್ರಕರಣದ ಬಗ್ಗೆ ನಮಗೆ ಗೊತ್ತಾಗಿರುತ್ತದೆ. ನ್ಯಾಯಾಲಯದಿಂದ ನೋಟಿಸ ಬಂದ ನಂತರ ಖರೀದಿ ಪತ್ರ ಈ ದಾವೆ ಬಾಕಿ ಇದ್ದಾಗ ನೊಂದಣಿ ಆಗಿದೆ ಎಂಬುದು ಗೊತ್ತಾಗಿದೆ. ನಾವು ಈ ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಯ ಮೇಲೆ ನ್ಯಾಯಾಲಯದಲ್ಲಿ ಯಾವದಾದರೂ ದಾವೆ ಬಾಕಿ ಇದೆ ಎಂಬುದನ್ನು ನಾನು ಮಾರಾಟ ಗಾರರಿಗೆ ವಿಚಾರಿಸಿದ್ದೇನೆ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪೇಪರ ಪ್ರಕಟಣೆ ಹೊರಡಿಸಿಲ್ಲ ಎಂದರೆ ಸರಿ. ನಾನು ವಕೀಲರ ಅಭಿಪ್ರಾಯ ಪಡೆದಿಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕದವರನ್ನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕೇಸ ಬಗ್ಗೆ ವಿಚಾರಿಸಿದ್ದೇನೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಯಾವುದೇ ದಾವಾ ಬಾಕಿ ಇಲ್ಲ ಎಂದು ಒಂದನೇ ಪ್ರತಿವಾದಿ ಕಡೆಯಿಂದ ಘೋಷಣೆಯನ್ನು ಪಡೆದಿಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಈ ದಾವಾ ಆಸ್ತಿಯ ಮೂಲ ಮಾಲೀಕರ ಬಗ್ಗೆ ನಾನು ವಿಚಾರಿಸಿಲ್ಲ ಎಂದರೆ ಹಕ್ಕು ಪತ್ರದಲ್ಲಿ ಇತ್ತು. ಹಕ್ಕು ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ಹಕ್ಕು ಪತ್ರವನು ವಿಚಾರಣೆ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಕ್ಕು ಪತ್ರವನ್ನು ಕೃಷ್ಣ ಮೇಲ್ದಂಡೆ ಯೋಜನೆ ಪ್ರಾಧಿಕಾರದವರು ನೀಡಿರುತ್ತಾರೆ. ಪ್ರಾಧಿಕಾರಕ್ಕೆ ಹೋಗಿ ದಾವಾ ಆಸ್ತಿಯ ಬಗ್ಗೆ ವೈಯಕ್ತಿಕವಾಗಿ ವಿಚಾರಿಸಿಲ್ಲ ಎಂದರೆ ಹಕ್ಕು ಪತ್ರದಲ್ಲಿ ಎಲ್ಲ ಸ್ಪಷ್ಟವಾಗಿತ್ತು ಎಂದು ನುಡಿಯುತ್ತಾರೆ.

ಒಂದನೇ ಪ್ರತಿವಾದಿ ನನಗೆ ಸುಮಾರು 8-10 ವರ್ಷಗಳಿಂದ ಪರಿಚಯ ಇದ್ದಾರೆ. ಅವರು ನಮ್ಮ ಸಮಾಜದವರು ಎಂಬ ಕಾರಣದಿಂದ ನಾನು ಆಸ್ತಿಯನ್ನು ಖರೀದಿಸಿದ್ದೇನೆ. ಖರೀದಿ ದಿನ ಹಣ ನೀಡದೆ ಖರೀದಿ ಆಗಿದೆ ಎಂದರೆ ನಾನು ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ. ಆ ದಿನ ನಾನು ರೂ. 12 ಲಕ್ಷ ಹಣವನ್ನು ನಗದು ರೂಪದಲ್ಲಿ ನೀಡಿದ್ದೇನೆ. ದಾಖಲೆಗಳು ಇಲ್ಲ.ಆ ದಿನ ನಾನು ಆ ಹಣವನ್ನು ಸ್ವಂತ ಬ್ಯಾಂಕಿಂದ, ನನ್ನ ತಂದೆಯವರ ಕಡೆಯಿಂದ ಹಾಗೂ ಮನೆಯಿಂದ ಸೇರಿಸಿ ಕೊಟ್ಟಿರುತ್ತೇನೆ. ನನ್ನ ಮನೆಯಲ್ಲಿ ರೂ.9 ಲಕ್ಷ ಹಾಗೂ ಮನೆಯಲ್ಲಿ ಸ್ವಲ್ಪ ಹಣ ಹಾಗೂ ನನ್ನ ಖಾತೆಯಿಂದ ಸ್ವಲ್ಪ ಹೀಗೆ ಸೇರಿಸಿ ನೀಡಿದ್ದೇನೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಪಡಿಸಲು ಹೇಳಿದರೆ ಹಾಜರು ಪಡಿಸುತ್ತೇನೆ. ನಾನು ಖರೀದಿ ದಿನ ಒಂದನೇ ಪ್ರತಿವಾದಿಗೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡುವ ಮೊದಲು ನನ್ನ ಹಾಗೂ ಒಂದನೇ ಪ್ರತಿವಾದಿ ನಡುವೆ ಖರೀದಿ ಕರಾರು ಆಗಿಲ್ಲ. ಖರೀದಿಸುವ ಪೂರ್ವದ ಒಂದು ವಾರದ ಮುಂಚೆ ನಮಗೆ ದಾವಾ ಆಸ್ತಿ ಮಾರಾಟಕ್ಕೆ ಬಂದಿದ್ದು ಗೊತ್ತಾಗಿರುತ್ತದೆ. ನನಗೂ ಹಾಗೂ ಅವರ

ನಡುವೆ ಈ ಮೊದಲು ಯಾವುದೇ ಹಣಕಾಸಿನ ವ್ಯವಹಾರವಾಗಿಲ್ಲ. ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ದಾವಾ ಆಸ್ತಿಯ ತೆರಿಗೆ ಪಾವತಿ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಸದರಿ ದಾಖಲೆಗಳನ್ನು ಒಂದನೇ ಪ್ರತಿವಾದಿ ಹೆಸರಿನಲ್ಲಿದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಂಚಾಯತಿ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ನಗರ ಸಭೆಯ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ನೋಟಿಸ ಬಂದ ನಂತರ ನಾನು ಒಂದನೇ ಪ್ರತಿವಾದಿಗೆ ವಿಚಾರಿಸಿದ್ದೇನೆ. ನಾನು ಒಂದನೇ ಪ್ರತಿವಾದಿಯನ್ನು ಈ ದಾವೆಯ ಸಂಬಂಧ ವಿಚಾರಿಸಿದ್ದೇನೆ. ಒಂದನೇ ಪ್ರತಿವಾದಿ ವಾದಿಗೆ ಮದುವೆಯಾದ ಬಗ್ಗೆ ತನಗೆ ಗೊತ್ತಿಲ್ಲ ಎಂದು ಹೇಳಿದ್ದರು. 1 ನೇ ಪ್ರತಿವಾದಿ ವಿರುದ್ಧ ನಾನು ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ. 1 ನೇ ಪ್ರತಿವಾದಿ ದುಂಡಪ್ಪನಿಗೆ ವಿವಾಹವಾದ ಬಗ್ಗೆ ನಾನು ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ. ದುಂಡಪ್ಪನಿಗೆ ಹೆಂಡತಿ ಬಗ್ಗೆ ವಿಚಾರಿಸಲಾಗಿ 1 ನೇ ಪ್ರತಿವಾದಿಯೆ ದುಂಡಪ್ಪನ ಹೆಂಡತಿ ಎಂದು ಗೊತ್ತಾಗಿರುತ್ತದೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸೇರಿಕೊಂಡು ಖೊಟ್ಟಿ ಖರೀದಿ ಪತ್ರವನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದುಂಡಪ್ಪನ ಹೆಂಡತಿ ಅಲ್ಲ ಎಂದು ಗೊತ್ತಿದ್ದರು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ನನ್ನ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಖರೀದಿ ದಿನದಂದು ದಾವಾ ಆಸ್ತಿಯ ಕಬ್ಜಾವನ್ನು ನನಗೆ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ದಾವಾ ಆಸ್ತಿಯಲ್ಲಿ ವಾದಿಯೆ ಕಬ್ಜಾದಲ್ಲಿದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪಡೆಯುವ ಸಂಬಂದರ್ಭದಲ್ಲಿ ಈ ದಾವೆಯ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.